ಓ ಎಸ್ ನಂ.35/2021
ಡಿ.ಡಬ್ಲ್ಯೂ-4 ರಾಜು ತಂದೆ ಕಲ್ಲಪ್ಪ ಬಡದಾಳ

**(ಇಂದು ದಿನಾಂಕಃ 07-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಜಿ ಎಚ್ ವಕೀಲರಿಂದ.

ಯಶವಂತಪ್ಪ ನನಗೆ ಗೊತ್ತು. ಅವರಿಗೆ ವಿಶ್ವನಾಥಪ್ಪ ಎಂದೂ ಕೂಡಾ ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ೧ನೇ ಪ್ರತಿವಾದಿ ಖಂಡು ಯಶವಂತರವರ ಮಗ ಎಂದರೆ ಸರಿ. ೨ನೇ ಪ್ರತಿವಾದಿ ಗಂಗಾಬಾಯಿರವರು ಖಂಡುರವರ ಹೆಂಡತಿ ಎಂದರೆ ಸರಿ. ೩ನೇ ಪ್ರತಿವಾದಿ ಮುಖೇಶ ಖಂಡು ಮತ್ತು ಗಂಗಾಬಾಯಿರವರ ಮಗ ಎಂದರೆ ಸರಿ. ವಾದಿ ರುಕ್ಮಾಬಾಯಿರವರು ೧ನೇ ಪ್ರತಿವಾದಿಯಾದ ಖಂಡುರವರ ಅಕ್ಕ ಎಂದರೆ ಸರಿ. ವಾದಿ ರುಕ್ಮಾಬಾಯಿ ಎಷ್ಟು ಆಸ್ತಿಗಳ ವಿಚಾರವಾಗಿ ಈ ದಾವೆ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ವಾದಿ ಯಾವುದರ ಸಲುವಾಗಿ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

೨. ೧ನೇ ಪ್ರತಿವಾದಿ ಖಂಡುರವರ ಮನೆತನದ ಹಿರಿತನವನ್ನು ಖಂಡುರವರೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರ ಮನೆಯಲ್ಲಿ ಯಾರು ಹಿರಿತನವನ್ನು ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ೬ನೇ ಪ್ರತಿವಾದಿ ಯಲ್ಲಾಲಿಂಗ ನನ್ನ ತಮ್ಮನಾಗಿರುತ್ತಾನೆ. ನಾನು ಮತ್ತು ೬ನೇ ಪ್ರತಿವಾದಿ ಕೂಡಿಯೆ ಇರುತ್ತೇವೆ. ನಾನು ೨೦೨೧ ರಲ್ಲಿ ಜಮೀನು ಖರೀದಿ ಮಾಡಿರುತ್ತೇನೆ. ನಾನು ೨ ಮತ್ತು ೩ನೇ ಪ್ರತಿವಾದಿಗಳಿಂದ ಜಮೀನು ಖರೀದಿ ಮಾಡಿರುತ್ತೇನೆ. ದಿನಾಂಕ 23-01-2023 ರಂದು ನಾನು ಜಮೀನು ಖರೀದಿಸಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ಸಾಕ್ಷಿಯು ನಾನು ೨೦೨೧ ರಲ್ಲಿ ವ್ಯವಹಾರ

ಮಾಡಿರುತ್ತೇನೆ ಎನ್ನುತ್ತಾರೆ. ೨೦೨೧ ರಲ್ಲಿ ಖರೀದಿ ವ್ಯವಹಾರ ಮಾಡಿದ ಕುರಿತು ತೋರಿಸಲು ನಾನು ಯಾವುದೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಜಮೀನು ಖರೀದಿ ಮಾಡುವಾಗ ನ್ಯಾಯಾಲಯದಲ್ಲಿ ದಾವೆ ಇದ್ದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಾನು ಜಮೀನು ಖರೀದಿ ಮಾಡುವ ಮೊದಲು ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ದಾಖಲೆಗಳಾದ ಬಗ್ಗೆ ನಾನು ಕೇಳಿರುವುದಿಲ್ಲ. ೬ನೇ ಪ್ರತಿವಾದಿಯಾದ ನನ್ನ ತಮ್ಮ ಕೂಡಾ ನನ್ನ ಜೊತೆಗೆ ಜಮೀನು ಖರೀದಿ ಮಾಡಿರುತ್ತಾರೆ. ೬ನೇ ಪ್ರತಿವಾದಿ ದಿನಾಂಕ 25-10-2022 ರಂದು ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ೬ನೇ ಪ್ರತಿವಾದಿ ಜಮೀನು ಖರೀದಿ ಮಾಡಿದ ೩ ತಿಂಗಳ ನಂತರ ನಾನು ಜಮೀನು ಖರೀದಿ ಮಾಡಿರುತ್ತೇನೆ ಎಂದರೆ ಸರಿ.

೩. ದಾವಾ ಆಸ್ತಿಗಳು ಹಿರಿಯರಿಂದ ಬಂದವು ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಾನು ಜಮೀನು ಖರೀದಿ ಮಾಡುವಾಗ ಯಶವಂತಪ್ಪರವರ ಹೆಸರಿನಲ್ಲಿ ಜಮೀನುಗಳಿದ್ದ ಬಗ್ಗೆ ದಾಖಲೆಗಳನ್ನು ನೋಡಿರುವುದಿಲ್ಲ. ೧ನೇ ಪ್ರತಿವಾದಿ ಖಂಡು ನನಗೆ ಸಂಬಂಧಿಕರಲ್ಲ. ನಾವು ಹೆಸರಿಗೆ ಮಾತ್ರ ಖರೀದಿ ಪತ್ರಗಳನ್ನು ಮಾಡಿಕೊಂಡಿದ್ದು, ದಾವೆ ಮುಗಿದ ನಂತರ ಸದರಿ ಜಮೀನುಗಳನ್ನು ಮರಳಿ ನಮ್ಮ ಮಾರಾಟಗಾರರಿಗೆ ಕೊಡುವ ವಿಚಾರ ಹೊಂದಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ೬ನೇ ಪ್ರತಿವಾದಿ ಖರೀದಿಸಿದ ಜಮೀನುಗಳ ಚೆಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ.

೪. ೨೦೨೨-೨೩ ರವರೆಗೆ ನಾನು ಖರೀದಿ ಮಾಡಿದ ಜಮೀನು ೨ನೇ ಪ್ರತಿವಾದಿ ಗಂಗುಬಾಯಿಯ ಹೆಸರಿನಲ್ಲಿಯೆ ಇತ್ತು ಎಂದರೆ ಸರಿ. ನಾನು ಸರ್ವೆ ನಂಬರ ೩೫೫ ರ ಜಮೀನನ್ನು ಖರೀದಿಸಿರುತ್ತೇನೆ. ನಾನು ನ್ಯಾಯಾಲಯದಲ್ಲಿ ಕೇಸು ಇದ್ದ ವಿಚಾರ

ಗೊತ್ತಿದ್ದರೂ ಸಹ ಖರೀದಿ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಜಮೀನು ಖರೀದಿ ಮಾಡುವಾಗ ದಾವೆ ನ್ಯಾಯಾಲಯದಲ್ಲಿ ಇದ್ದ ಕುರಿತು ನನಗೆ ಗೊತ್ತಿರಲಿಲ್ಲ ಎಂದು ಬರೆಸಿದ ಬಗ್ಗೆ ನನಗೆ ಗೊತ್ತಿಲ್ಲ. ವಾದಿಗೆ ಆಸ್ತಿ ನೀಡಬಾರದು ಎಂಬ ಉದ್ದೇಶದಿಂದ ನಾನು ಮತ್ತು ೨ ಮತ್ತು ೩ನೇ ಪ್ರತಿವಾದಿ ಸೇರಿಕೊಂಡು ದಾಖಲೆಗಳನ್ನು ಸೃಷ್ಠಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಮ್ಮನಾದ ೬ನೇ ಪ್ರತಿವಾದಿ ಕೂಡಾ ಈ ದಾವೆಯನ್ನು ದಾಖಲಿಸಿದ ನಂತರವೆ ಜಮೀನು ಖರೀದಿ ಪತ್ರ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

೫. ನನ್ನ ಮುಖ್ಯ ವಿಚಾರಣೆಯಲ್ಲಿ ದಾವಾ ಆಸ್ತಿಗಳು ಹಿರಿಯರಿಂದ ಬಂದಿರುವುದಿಲ್ಲ ಎಂದು ನಾನು ಬರೆಸಿರುವುದಿಲ್ಲ. ೨ನೇ ಪ್ರತಿವಾದಿಗೆ ಈ ದಾವೆ ಹಾಕಿದ ನಂತರ ಆಸ್ತಿ ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ೧ನೇ ಪ್ರತಿವಾದಿ ಖಂಡು ತಮ್ಮ ಮನೆಯ ದನಗಳನ್ನು ಕಾಯುವ ಕೆಲಸ ಮಾತ್ರ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ೧ನೇ ಪ್ರತಿವಾದಿಗೆ ದಾವಾ ಆಸ್ತಿಗಳ ಆದಾಯವನ್ನು ಬಿಟ್ಟು ಬೇರೆ ಯಾವುದೆ ಆದಾಯ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ನಿಖರವಾಗಿ ನನಗೆ ಹೇಳಲು ಗೊತ್ತಿಲ್ಲ ಎಂದರೆ ಸರಿ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.